ಸೇಡಂ ನಗರದಲ್ಲಿ ಸರಕಾರಿ ಪದವಿ ಮಹಾವಿದ್ಯಾಲಯ

4596 - ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಗುಲ್ಬರ್ಗಾ ಜಿಲ್ಲೆಯ ಸೇಡಂ ನಗರದಲ್ಲಿ ಸರ್ಕಾರಿ ಪದವಿ ಮಹಾವಿದ್ಯಾಲಯ 1994-95ನೇ ಸಾಲಿನಲ್ಲಿ ಅಡಿಗಲ್ಲು ಸಮಾರಂಭವಾಗಿ ಇಲ್ಲಿಯವರೆಗೂ ಗುತ್ತಿಗೆದಾರರು ಈ ಕಾಮಗಾರಿಯನ್ನು ಪೂರ್ತಿ ಗೊಳಿಸಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.*

ಆ) *ಒಂದು ವೇಳೆ ಗುತ್ತಿಗೆದಾರರು ಸಮಯದ ಮೇಲೆ ಕೆಲಸವನ್ನು ಮಾಡದಿದ್ದರೆ ಅವರ ಮೇಲೆ ಕಾನೂನು ಕ್ರಮ ಕೈಗೊಂಡು ಬೇರೆ ಗುತ್ತಿಗೆದಾರರಿಗೆ ಈ ಕೆಲಸವನ್ನು ವಹಿಸಿಕೊಟ್ಟು ಪೂರ್ತಿ ಮಾಡಿಲ್ಲವೇಕೆ ? ಇಲ್ಲಿಯವರೆಗೆ ಈ ಕಟ್ಟಡಕ್ಕೆ ತಗಲಿರುವ ಖರ್ಚು ಎಷ್ಟು ? ಮತ್ತು ಮುಂದೆ ಇದಕ್ಕೆ ಬೇಕಾಗುವ ಹಣವೆಷ್ಟು ?*

ಇ) *ಈ ಕಟ್ಟಡದ ಬಗ್ಗೆ ಟೆಂಡರು ಕರೆಯಲಾಗಿದೆಯೇ ಹಾಗಿದ್ದಲ್ಲಿ ಯಾವಾಗ ಪೂರ್ತಿಯಾಗುವುದು ?*

ಡಾ. ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :

ಅ) ಸದರಿ ಕಟ್ಟಡದ ಕಾಮಗಾರಿಯನ್ನು ಹೆಚ್.ಕೆ.ಡಿ.ಬಿ. ಮತಿಯಿಂದ ನಿರ್ಮಾಣಗೊಳಿಸಿದ್ದು, 31-09-2000ದ ವರೆಗೆ 42.00 ಲಕ್ಷ ರೂ.ಗಳನ್ನು ಖರ್ಚು ಮಾಡಿ ಕಟ್ಟಡವನ್ನು ಪೂರ್ಣಗೊಳಿಸಲಾಗಿದೆ.

ಆ) ಇಲ್ಲಿಯವರೆಗೂ ಸದರಿ ಕಟ್ಟಡಕ್ಕೆ ಹೆಚ್.ಕೆ.ಡಿ.ಬಿ.ಯು 42.00 ಲಕ್ಷ ರೂ.ಗಳನ್ನು ಖರ್ಚು ಮಾಡಿರುತ್ತದೆ ಹಾಗೂ ಕಾಂಪೌಂಡ್ ಮತ್ತು ಆಟದ ಮೈದಾನದ ನಿರ್ಮಾಣಕ್ಕಾಗಿ 15.00 ಲಕ್ಷ ರೂ.ಗಳ ಅವಶ್ಯಕತೆ ಇದೆ.

ಇ) ಇಲ್ಲ.

ಸೇಡಂ ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳು

4597 - ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಗುಲ್ಬರ್ಗಾ ಜಿಲ್ಲೆಯ ಸೇಡಂ ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳ ಸಂಖ್ಯೆ ಎಷ್ಟು ? ಹಾಗೂ ಖಾಲಿ ಇರುವ ಇತರ ಸಿಬ್ಬಂದಿ ವರ್ಗಗಳ ಸಂಖ್ಯೆ ಎಷ್ಟು ? (ಹುದ್ದೆವಾರು ಮಾಹಿತಿ ಒದಗಿಸುವುದು)*

ಆ) *ಸದರಿ ಆಸ್ಪತ್ರೆಯಲ್ಲಿ ಔಷಧಿಗಳ ಸರಬರಾಜು ಇಲ್ಲದೇ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?*

ಇ) *ಸದರಿ ಆಸ್ಪತ್ರೆಯಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳು ಯಾವುವು ?*